**ಎಂವಿಸಿ ಸಂಖ್ಯೆಃ 2247/2023 ಪಿಡಬ್ಲೂಃ 1**

**ದಿನಾಂಕಃ 13-02-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದಃ**

ಸಾಕ್ಷಿದಾರರು ದಾಖಲಾತಿಗಳನ್ನು ನೋಡಿ ಗುರುತಿಸಿರುತ್ತಾರೆ.

1. ನನ್ನ ಮಗ ಹರೀಶ ಈತನ ಮೂಲ ಆಧಾರ ಕಾರ್ಡನ್ನು ನಿಪಿ-13 ಎಂದು ಗುರುತಿಸಲಾಯಿತು.
2. ನನ್ನ ಮೂಲ ಆಧಾರ ಕಾರ್ಡನ್ನು ನಿಪಿ-14 ಎಂದು ಗುರುತಿಸಲಾಯಿತು.

ಅರ್ಜಿಯಲ್ಲಿ ಕೇಳಿದಂತೆ ಅರ್ಜಿಯನ್ನು ಪುರಸ್ಕರಿಸಬೇಕೆಂದು ಕೇಳಿಕೊಳ್ಳುತ್ತೇನೆ.

**ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಿಂದ**

2 ನೇ ಅರ್ಜಿದಾರಳು ನನ್ನ ಮಗಳು. 3 ನೇ ಅರ್ಜಿದಾರ ನನ್ನ ಮಗ. ನನ್ನ ಗಂಡ ನಾಗರಾಜಪ್ಪ ತೀರಿಕೊಂಡಿರುತ್ತಾರೆ. ಮೃತ ಹರೀಶ ಈತನಿಗೆ ವಿವಾಹ ಆಗಿರಲಿಲ್ಲ. ಸದ್ರಿ ಹರೀಶ ಗೌಂಡಿ ಕೆಲಸದಿಂದ ತಿಂಗಳಿಗೆ 50 ಸಾವಿರ ದುಡಿಯುತ್ತಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. ನನ್ನದು ಚಿಕ್ಕಲಿಕೆರೆ ಗ್ರಾಮ ಚನ್ನಗಿರಿ ತಾಲೂಕು ದಾವಣಗೆರೆ ಎಂದರೆ ಸರಿ. ಅಪಘಾತ ಹೊಳಲ್ಕೆರೆಯಲ್ಲಿ ಆಗಿದೆ ಎಂದರೆ ನಿಜ. ನಾನು ಮೊದಲು ನಮ್ಮ ಊರಿನಲ್ಲಿ ಖಾಯಂ ತರೀಖವಾಗಿ ವಾಸವಾಗಿದ್ದೆ ಈಗ ನನ್ನ ಮಗ ತೀರಿಕೊಂಡಿದ್ದರಿಂದ ನನ್ನ ಅಣ್ಣ ರಾಣೆಬೆನ್ನೂರಿನಲ್ಲಿ ತಂದು ಇಟ್ಟುಕೊಂಡಿದ್ದಾನೆ ಎಂದು ಹೇಳುತ್ತಾರೆ.

ನನಗೆ 3 ಜನ ಮಕ್ಕಳು ಮಾತ್ರ. ಆ ದಿನ ದ್ವಿಚಕ್ರ ವಾಹನವನ್ನು ನನ್ನ ಮಗ ಚಲಾಯಿಸುತ್ತಿದ್ದ ಅದು ನಮ್ಮದೇ ವಾಹನ. ಸದ್ರಿ ವಾಹನ ಯಾರ ಹೆಸರಿನಲ್ಲಿತ್ತು ಎಂದು ನನಗೆ ಗೊತ್ತಿಲ್ಲ. ನನ್ನ ಮಗನಿಗೆ ಮೋಟಾರ್ ಸೈಕಲ್ ಚಲಾಯಿಸಲು ಚಾಲನಾ ಪ್ರಮಾಣ ಪತ್ರ ಇದ್ದಿರಲಿಲ್ಲ ಎಂದರೆ ಸರಿ ಅಲ್ಲ. ನಾನು ಸದ್ರಿ ಚಾಲನಾ ಪ್ರಮಾಣ ಪತ್ರವನ್ನು ಹಾಜರುಪಡಿಸಿಲ್ಲ ಎಂದರೆ ನಿಜ. ಸದ್ರಿ ದ್ವಿಚಕ್ರ ವಾಹನ ನಡೆಸಲು ನನ್ನ ಮಗನಿಗೆ ಬರುತ್ತಿರಲಿಲ್ಲ ಎಂದರೆ ಸರಿ ಅಲ್ಲ. ಸದ್ರಿ ಟ್ರ್ಯಾಕ್ಟರ್ ಎದುರಿನಿಂದ ಬಂದು ಅಪಘಾತಪಡಿಸಿದೆ. ಅಪಘಾತ ಎದುರು ಬದುರು ರಸ್ತೆ ಮಧ್ಯದಲ್ಲಿ ಆಗಿದೆ ಎಂದರೆ ಸರಿ ಅಲ್ಲ ರಸ್ತೆ ಬದಿಗೆ ಆಗಿದೆ ಎಂದು ಹೇಳುತ್ತಾರೆ. ನನ್ನ ಮಗ ಆ ದಿನ ಅತಿ ವೇಗವಾಗಿ ಸದ್ರಿ ದ್ವಿಚಕ್ರ ವಾಹನ ಚಲಾಯಿಸಿಕೊಂಡು ಹೋಗಿ ಅಪಘಾತಪಡಿಸಿಕೊಂಡಿರುತ್ತಾನೆ ಎಂದರೆ ಸರಿ ಅಲ್ಲ. ಅಪಘಾತ ಸಂಪೂರ್ಣವಾಗಿ ನನ್ನ ಮಗನ ತಪ್ಪಿನಿಂದ ಆಗಿದೆ ಎಂದರೆ ಸರಿ ಅಲ್ಲ.

ಅದು ಟ್ರ್ಯಾಕ್ಟರ್ ಟ್ರೇಲರ್ ನಿಂದಾಗಿ ಅಪಘಾತ ಸಂಭವಿಸಿದೆ ಎಂದು ಹೇಳುತ್ತಾರೆ.

ರಂಗಸ್ವಾಮಿ ನನ್ನ ಸಂಬಂಧಿಕ ಎಂದರೆ ನಿಜ. ಆತನೇ ದೂರು ನೀಡಿರುತ್ತಾನೆ. ನನ್ನ ಮಗನ ತಪ್ಪಿನಿಂದ ಅಪಘಾತ ಸಂಭವಿಸಿದೆ ಎಂದರೆ ಸರಿ ಅಲ್ಲ. ಸದ್ರಿ ನನ್ನ ಮಗನ ತಪ್ಪಿನಿಂದ ಅಪಘಾತ ಸಂಭವಿಸಿದೆ ಎಂದು ಗೊತ್ತಿದ್ದರೂ ಸಹ ಸುಳ್ಳು ಸಂಗತಿಗಳನ್ನು ಮುಂದೆ ಮಾಡಿ ಟ್ರ್ಯಾಕ್ಟರ್ ಮತ್ತು ಟ್ರೇಲರ್ ಚಾಲಕನ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿ ಅಲ್ಲ.

ನಾನು ಮತ್ತು ಇತರ ನನ್ನ ಮಕ್ಕಳು ಮೃತ ಹರೀಶನ ಆದಾಯದ ಮೇಲೆ ಯಾವತ್ತೂ ಅವಲಂಬಿತರಾಗಿರಲಿಲ್ಲ ಎಂದರೆ ಸರಿ ಅಲ್ಲ. ಅಪಘಾತವಾದ ನಂತರ ಚನ್ನಗಿರಿಯ ಸರ್ಕಾರಿ ಆಸ್ಪತ್ರೆಗೆ ತೋರಿಸಿದ್ದು ಅಲ್ಲಿಂದ ಮಂಗಳೂರಿನ ಶ್ರೀನಿವಾಸ ಆಸ್ಪತ್ರೆಗೆ ನಂತರ ಕರೆದುಕೊಂಡು ಹೋಗಿದ್ದು ಇತ್ತು. ಅಲ್ಲಿ ಆತ ತೀರಿಕೊಂಡಿರುತ್ತಾನೆ. ಆತ ಬೆಳಗಿನಜಾವ 4 ಗಂಟೆಗೆ ತೀರಿಕೊಂಡಿರುತ್ತಾನೆ. ಸದ್ರಿ ಆ ಆಸ್ಪತ್ರೆಗಳಲ್ಲಿ ಯಾವ ರೀತಿಯ ಚಿಕಿತ್ಸೆ ನೀಡಿರುತ್ತಾರೆ ಎಂದು ನನಗೆ ಹೇಳಲು ಬರುವುದಿಲ್ಲ. ಸದ್ರಿ ನನ್ನ ಮಗನಿಗೆ ಮಾರಣಾಂತಿಕವಾದ ಗಾಯಗಳು ಆಗಿರಲಿಲ್ಲ ಎಂದರೆ ಸರಿ ಅಲ್ಲ. ಆತನಿಗೆ ಮಾರಣಾಂತಿಕ ಗಾಯಗಳು ಆಗಿಲ್ಲ ಎಂದು ಚನ್ನಗಿರಿ ವೈದ್ಯರು ಗಾಯದ ಪ್ರಮಾಣ ಪತ್ರ ನೀಡಿರುತ್ತಾರೆ ಎಂದರೆ ಸರಿ ಅಲ್ಲ. ಬುದ್ಯಾಪೂರ್ವಕವಾಗಿ ನಾನು ಆ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ ಅಲ್ಲ. ಸದ್ರಿ ಅಪಘಾತ ನನ್ನ ಮಗನ ತಪ್ಪಿನಿಂದ ಸಂಭವಿಸಿದ್ದು ಹೊರತು ಟ್ರ್ಯಾಕ್ಟರ್ ಮತ್ತು ಟ್ರೇಲರ್ ಚಾಲಕನ ತಪ್ಪಿನಿಂದ ಆಗಿಲ್ಲ ಎಂದರೆ ಸರಿ ಅಲ್ಲ. ಟ್ರ್ಯಾಕ್ಟರ್ ಮತ್ತು ಟ್ರೇಲರ್ ಚಾಲಕನ ತಪ್ಪಿನಿಂದ ಅಪಘಾತ ಸಂಭವಿಸದೇ ಇರುವುದರಿಂದ 2 ನೇ ಎದುರುದಾರ ಪರಿಹಾರ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿ ಅಲ್ಲ.

**ಪಾಟೀ ಸವಾಲುಃ**

4 ನೇ ಎದುರುದಾರರ ಪರ ವಕೀಲರು ಸಮಯವಕಾಶ ಕೋರಿದ್ದರಿಂದ ಸಮಯ ನೀಡಿ ಪಾಟೀ ಸವಾಲಿಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

**(ಓ.ಹೇ.ಕೇ.ಸ.)**

**ಪ್ರಭಾರ 3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ, ರಾಣೆಬೆನ್ನೂರ.**

ಸಾಕ್ಷಿದಾರರ ಸಹಿಃ